ಇದೇರೀತಿ ಅನೇಕ ವರ್ಷಗಳಿಂದ ಪಂಪುಸೆಟ್ಟುಗಳಿಗೂ ಪವರ್ ಕೊಟ್ಟಿಲ್ಲ. ಅನೇಕ ಜನ ಈಗ್ಗೆ ೩-೪ ವರ್ಷಗಳ ಹಿಂದೆಯೇ ಪಂಪುಸೆಟ್ಟುಗಳನ್ನು ಖರೀದಿ ಮಾಡಿದ್ದಾರೆ. ಈ ರೀತಿ ಎಸ್ಟಿಮೇಟ್ ಮಾಡದೇ ಇರುವಂಥ ಸಾವಿರಾರು ಅರ್ಜಿಗಳು ಇವೆ. ಈ ರೀತಿ ಮಾಡಿರುವ ಅಧಿಕಾರಿಗಳು ಬಸವಣ್ಣಪ್ಪ ಎಂದರು. ಇವರು ಯಾವ ಕೆಲಸವನ್ನೂ ಮಾಡುತ್ತಾ ಇಲ್ಲ. ಅಲ್ಲಿ ರಾಶಿಗಟ್ಟಲೆ ಅರ್ಜಿಗಳೂ, ಫೈಲುಗಳು ವರ್ಷಾನುಗಟ್ಟಲೆ ಬಿದ್ದಿವೆ. ತಾವು ಪರಿಶೀಲಿಸಲಾಗುವುದು ಎಂದು ಹೇಳುತ್ತಿದ್ದೀರಿ. ದಯವಿಟ್ಟು ಏನು ಕ್ರಮ ಕೈಗೊಳ್ಳುತ್ತೀರಿ ಎಂದು ತಾವು ಹೇಳಬೇಕು.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಸ್ಪೆಸಿಫಿಕ್ ಆಗಿ, ನಿರ್ದಿಷ್ಟವಾಗಿ ಅಧಿಕಾರಿಯ ಕಾರಣ ಇದ್ದರೆ, ಆ ಅಧಿಕಾರಿಯಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ, ಇದು ಬೋರ್ಡ್ ಗಮನಕ್ಕೆ ಬಂದಿಲ್ಲ ಎನ್ನುವುದಂತೂ ನಿಜ. ಮೂರು ವರ್ಷದ ಹಿಂದೆ ಮುನಿಸಿಪಾಲಿಟಿಯವರು ರೆಸುಲ್ಯೂಷನ್ ಮಾಡಿ ಕಳುಹಿಸಿದ್ದರೂ, ಆದಕ್ಕೆ ಕೆ.ಇ.ಬಿ. ಆಫೀಸಿನಲ್ಲಿ ಕಲವೊಂದು ಪ್ರೊಸೀಜರ್ ಇದೆ. ಅದಕ್ಕೆ ಬೇಕಾದಂಥ ಖರ್ಚಿನ್ನು ಕೆಲವು ವೇಳೆ ಸಂಬಂಧಪಟ್ಟವರೇ ವಹಿಸಬೇಕಾಗುತ್ತದೆ. ಇದು ಪುರಸಭೆ ಆಗಿರುವುದರಿಂದ, ಪುರಸಭೆಯಲ್ಲಿ ಏನೋ ತಪ್ಪಾಗಿರಬಹುದು. ನಿರ್ದಿಷ್ಟವಾದ ಕಾರಣ ತೋರಿಸಿ ಬರೆದರೆ ನಾನು ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ವಸಂತ ಬಂಗೇರ.—ಪುರಸಭೆಯ ಒಬ್ಬ ಸದಸ್ಯರು ಆಫೀಸರನ್ನು ಕರೆದುಕೊಂಡು ಹೋಗಿ, ಎಲ್ಲಾ ವ್ಯವಸ್ಥೆಯನ್ನು ತೋರಿಸಿದ್ದಾರೆ, ಮೂರು ವರ್ಷಗಳಿಂದ ಎಸ್ಟಿಮೇಟ್ ಆಗಿಲ್ಲ. ಅಲ್ಲಿ ೩-೪ ವರ್ಷಗಳಿಂದ ಪಂಪ್‌ಸೆಟ್ ಖರೀದಿ ಮಾಡಿರುವುದು ಇದೆ. ಅಲ್ಲಿಗೆ ಲೈನ್ ಹಾಕುವ ವ್ಯವಸ್ಥೆಯನ್ನೂ ಮಾಡಿಲ್ಲ. ಇದರಿಂದ ಅನೇಕ ಜನರಿಗೆ ತೊಂದರೆಯಾಗಿದೆ. ಇದರ ಬಗ್ಗೆ ತಾವು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಇದನ್ನು ಇಲಾಖೆಯಿಂದ ವಿಚಾರಣೆ ಮಾಡಿಸಿ ಕ್ರಮ ಕೈಗೊಳ್ಳುತ್ತೇನೆ.

ಅಧ್ಯಕ್ಷರು.—ಶ್ರೀ ಎಂ. ಪಿ. ಕೇಶವಮೂರ್ತಿ,-ಆಬ್ಸೆಂಟ್

ಶ್ರೀ ಎಂ. ವೀರಯ್ಯಸ್ವಾಮಿ. ಆಬ್ಸೆಂಟ್. ಮುಂದೆ ಅಲ್ಪಕಾಲಾವಧಿ ಪ್ರಶ್ನೆ.-

ಸದಸ್ಯರು.—ಆಬ್ಸೆಂಟ್.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಯಾದಗಿರಿ ತಾಲ್ಲೂಕಿನಲ್ಲಿ ಗ್ರಾಮೀಣ ವಿದ್ಯುದೀಕರಣ ಯೋಜನೆ

೧೬೫೪. ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್).—ಮಾನ್ಯ ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಯಾದಗಿರಿ ತಾಲ್ಲೂಕಿನಲ್ಲಿ ಆರ್.ಇ.ಸಿ. ಕಾರ್ಯಕ್ರಮಕ್ಕಾಗಿ ಗುರುತಿಸಲ್ಪಟ್ಟ ಉಪ ಗ್ರಾಮಗಳು ತಾಂಡಾಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಈ ತಾಲ್ಲೂಕಿನಲ್ಲಿ ತಾಂಡಾಗಳು, ಗ್ರಾಮಗಳು, ಉಪ ಗ್ರಾಮಗಳು ಮತ್ತು ಹರಿಜನ ವಾಡಗಳ ವಿದ್ಯುದೀಕರಣದ ಕಾರ್ಯ ನೆರವೇರಿಸಲು ಸರ್ಕಾರ ಕೈಗೊಂಡ ಕಾರ್ಯಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ವಾಣಿಜ್ಯ, ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಯಾದಗಿರಿ ತಾಲ್ಲೂಕಿನಲ್ಲಿ ವಿದ್ಯುದೀಕರಣಕ್ಕೆ ೪೭ ತಾಂಡಾಗಳನ್ನು ಗುರುತಿಸಲಾಗಿದೆ. ಆರ್.ಇ.ಸಿ. ಕಾರ್ಯಕ್ರಮಕ್ಕೆ ಯಾವ ಉಪ ಗ್ರಾಮವನ್ನು ಗುರುತಿಸಿಲ್ಲ.

ಆ) ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

೧) ೧೦೦ ಹರಿಜನ ಬಸ್ತಿಗಳ ವಿದ್ಯುದೀಕರಣದ ಆರ್.ಇ.ಸಿ. ಯೋಜನೆ ಮಂಜೂರಾಗಿದ್ದು ಸದ್ಯದಲ್ಲಿಯೇ ಇದನ್ನು ಕೈಗೆತ್ತಿಕೊಳ್ಳಲಾಗುತ್ತದೆ.

೨) ಮೇಲಿನ ಯೋಜನೆ ಪೂರ್ಣಗೊಂಡ ನಂತರ ೪೭ ತಾಂಡಗಳ ಯೋಜನೆಯನ್ನು ಆರ್.ಇ.ಪಿ.ಗೆ ಮಂಜೂರಾತಿಗೆ ಕಳುಹಿಸಲಾಗುತ್ತದೆ.

೩) ೨೮-೨-೮೭ರ ಹೊತ್ತಿಗೆ ವಿದ್ಯುದೀಕರಣವಾದ ೪ ಗ್ರಾಮಗಳಿದ್ದು ಅವುಗಳನ್ನು ೧೯೮೭-೮೮ರಲ್ಲಿ ವಿದ್ಯುದೀಕರಣಗೊಳಿಸಲು ಯೋಚಿಸಿದೆ.

೪) ವಿದ್ಯುದೀಕರಣವಾಗಬೇಕಾಗಿರುವ ೭೩ ಉಪ ಗ್ರಾಮಗಳ (ತಾಂಡಗಳೂ ಸೇರಿ) ಕೆಲಸವನ್ನು ಎಲ್ಲಾ ಗ್ರಾಮಗಳ ವಿದ್ಯುದೀಕರಣವಾದ ನಂತರ ತೀವ್ರಗೊಳಿಸಲಾಗುತ್ತದೆ.

ಶ್ರೀಗಂಧ ಮರದ ಕಳ್ಳ ಸಾಗಾಣಿಕೆ

೧೦೯೪. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೪ ರಿಂದ ೧೯೮೭ ರವರೆಗೆ ಶ್ರೀಗಂಧ ಕಳ್ಳಸಾಗಣಿಕೆಗೆ ತೊಡಗಿದ ಒಟ್ಟು ಎಷ್ಟು ಲಾರಿಗಳನ್ನು ಹಿಡಿಯಲಾಗಿದೆ ?

ಆ) ೧೯೮೪ ರಿಂದ ೧೯೮೭ರವರೆಗೆ ಪ್ರತಿ ವರ್ಷ ಶಿಕಾರಿಪುರ ತಾಲ್ಲೂಕಿನಲ್ಲಿ ಮಂತ್ರಿ ಗದಗ್ ವಲಯದಲ್ಲಿ ಈ ಬಗ್ಗೆ ಹಿಡಿದಿರುವ ಲಾರಿಗಳ ಸಂಖ್ಯೆ ಎಷ್ಟು ?

ಇ) ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮ ಏನು ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು).—

ಅ) ಕಳೆದ ಮೂರು ವರ್ಷಗಳಲ್ಲಿ ಶ್ರೀಗಂಧದ ಕಳ್ಳ ಸಾಗಾಣಿಕೆಯಲ್ಲಿ ತೊಡಗಿದ ಲಾರಿಗಳ ವಿವರ ಕೆಳಗಿನಂತಿದೆ.—

ವರ್ಷ.—	೧೯೮೪-೮೫	೧೯೮೫-೮೬	೧೯೮೬-೮೭	ಒಟ್ಟು
ಲಾರಿಗಳು.—	೨೮	೪೦	೭೫	೧೪೩
ಆ)	೧೯೮೪-೮೫	೧೯೮೫-೮೬	೧೯೮೬-೮೭	
ಶಿಕಾರಿಪುರ.—	೩	೩	೪	
ಗದಗ್ ವಲಯ.—	೨	೬	೧೫	

ಇ) ಶಿಕಾರಿಪುರದಲ್ಲಿ ಒಟ್ಟು ೧೦ ಲಾರಿಗಳನ್ನು ಮಂತ್ರಿ ಗದಗ್ ವಲಯದಲ್ಲಿ ೨೩ ಲಾರಿಗಳನ್ನು ಹಿಡಿಯಲಾಗಿದೆ.

೧) ಕರ್ನಾಟಕ ಅರಣ್ಯ ಕಾಯಿದೆ ೧೯೬೩ರ ಪ್ರಕಾರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಕಳ್ಳ ಸಾಗಾಣಿಕೆಯಲ್ಲಿ ತೊಡಗಿದ ವಾಹನಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಅಧಿಕಾರ ಹೊಂದಿರುತ್ತಾರೆ.

೨) ೧೮ ಅರಣ್ಯ ಸಂಚಾರಿ ದಳಗಳಿದ್ದು ಅವು ಅವ್ಯಾಹತವಾಗಿ ಅರಣ್ಯ ಗುನೆ : ಪ್ರಕರಣಗಳನ್ನು ಪತ್ತೆ ಹಚ್ಚಲು, ಅಪರಾಧಿಗಳನ್ನು ಹಿಡಿದು ಕ್ರಮ ಕೈಗೊಳ್ಳಲು ಇನ್ನುಳಿದ ಅರಣ್ಯ ಸಿಬ್ಬಂದಿಗಳೊಂದಿಗೆ ಶ್ರಮಿಸುತ್ತಿದ್ದಾರೆ ಮತ್ತು ಪಹರೆ ನಡೆಸುತ್ತಿದ್ದಾರೆ.

೩) ಅರಣ್ಯ ಸಿಬ್ಬಂದಿಗಳಿಗೆ ಸ್ವಸಂರಕ್ಷಣೆಗಾರಿ ಆಯುಧಗಳನ್ನು ನೀಡಲಾಗಿದೆ. ತ್ವರಿತ ಕಾರ್ಯಾಚರಣೆಗಾಗಿ ಇಲಾಖೆಯ ಕಾರುಗಳನ್ನು, ಲಾರಿಗಳನ್ನು ಮಂತ್ರಿ ಜೀಪುಗಳನ್ನು ನೀಡಲಾಗಿದೆ.

೪) ಅರಣ್ಯ ಸಂಪತ್ತು ಪ್ರಾರಂಭಿಸಿ ಹೋಗಿರುವ ನೆರೆ ರಾಜ್ಯದ ಗಡಿಗಳಲ್ಲಿ ಮತ್ತು ಆಯಕಟ್ಟಿನ ಸ್ಥಳಗಳಲ್ಲಿ ನಿಸ್ತಂತು ಘಟಕಗಳನ್ನು ಸ್ಥಾಪಿಸಿ ಶೀಘ್ರ ಸಂಪರ್ಕಕ್ಕಾಗಿ ಅರಣ್ಯ ಕಾರ್ಯಾಚರಣೆಯ ಸಿಬ್ಬಂದಿಗೆ ಅನುಕೂಲತೆ ಒದಗಿಸಲಾಗಿದೆ.

೫) ಎಲ್ಲಾ ಅರಣ್ಯ ಸಿಬ್ಬಂದಿಗಳಿಗೆ ಅರಣ್ಯ ಗುನೆ: ಗಳನ್ನು ಪ್ರತಿಬಂಧಿಸಲು ಮಂತ್ರಿ ಪತ್ತೆ ಹಚ್ಚುವಲ್ಲಿ ಕಟ್ಟು ನಿಟ್ಟಾದ ಕ್ರಮ ಕೈಗೊಳ್ಳಲು ಆದೇಶ ನೀಡಲಾಗಿದೆ.